ನಂ. 368. ತಾರೀಖು 14ನೇ ಫಿಬ್ರವರೀ 1876.

ತಮ್ಮನ್ನ ನೋಡಲು ಇಚ್ಛೈಸುವ ಯಾವ ನೇಟಿವ್ ದೊಡ್ಡ ಮನುಷ್ಯನನ್ನಾಗಲಿ, ಮಂಗಳವಾರ ಬೆಳಿಗ್ಗೆ 8 ಘಂಟೆ ಲಾಗಾಯತು 9 ಘಂಟೆ ವರಿಗೆ, ಈ ಮಧ್ಯ ಕಾಲದಲ್ಲಿ ಗಾರ್ಡಮೆಂಟ್ ಹೌಸಿನೊಳಗೆ ಆಕ್ಟಿಂಗ್ ಚೀಫ್ ಕಮ್ಮಿಷನರ್ ಸಾಹೆಬರವರು ಬರ ಮಾಡಿಕೊಳ್ಳುವರು.

ಆಕ್ಟಿಂಗ್ ಚೀಫ್ ಕಮ್ಮಿಷನರ್‌ರವರನ್ನು ನೋಡಲು ಉದ್ದೇಸಿಸುವ ದೊಡ್ಡ ಮನುಷ್ಯರು, ಸದರೀ ಮಂಗಳವಾರಕ್ಕೆ ಹಿಂದಿನ ದಿನ ಮಧ್ಯಾನ್ಹಕ್ಕೆ ಪೂರ್ವ ತಮ್ಮ ತಮ್ಮ ಕಾರ್ಡುಗಳನ್ನು ಸೆಕ್ರಟೇರಿ ಸಾಹೆಬರ ಬಳಿಗೆ ಕಳುಹಿಸಿಕೊಡಬೇಕೆಂದು ಕೋರೋಣಾಗಿರುತ್ತೆ. ಮತ್ತು ಯಾವ ವಿಷಯವನ್ನಾದರೂ ಕುರಿತು ಚರ್ಚಿಸುವದಕ್ಕೆ ಅವರಿಗೆ ಖಾಯಿಷ್ ಯಿದ್ದಲ್ಲಿ ಅಂತಾ ಖಾಯಿಷನ್ನು ಲೆಟರ್ ಮೂಲಕ ತಿಳಿಸತಕ್ಕದ್ದು.

ನಂ. 369. ತಾರೀಖು 14ನೇ ಫಿಬ್ರವರೀ 1876.

ಸ್ರ 1875ನೇ ಇಸವಿ ಅಕ್ಟೋಬರ್ 25ನೇ ಮುರ್ತುಂ 266ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಬೂದಿಹಾಳ ತಾಲ್ಲೂಕು ಅಮಲ್ದಾರ್ ಶಿ. ರಾಮೈಯ್ಯನವರಿಗೆ ಮೆಡಿಕಲ್ ಸರಟಿಫಿಕೇಟ್ ಮೇಲೆ ಕೊಡಲ್ಪಟ್ಟ 9 ತಿಂಗಳ ರಜಾ, 1876ನೇ ಇಸವಿ ಏಪ್ರೆಲ್ 30ನೇ ಮುರ್ತುಂ ವರಿಗೆ ವಿಸ್ತರಿಸಲ್ಪಟ್ಟಿರುತ್ತೆ.

ಅಮಲ್ದಾರ್ ವ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಸಲ್ದಾನಹಾ ಯವರು ರಾಮೈಯ್ಯನವರ ಗೈರ್‌ಹಾಜರೀಯಲ್ಲಿ ಅಥವಾ ಮುತ್ತೊಂದು ಹುಕ್ಕುಂ ಕೊಡುವ ವರಿಯಂತ ಬೂದಿಹಾಳ ತಾಲ್ಲೂಕು ಅಮಲ್ದಾರೀ ಕೆಲಸವನ್ನು ಆಕ್ಟಿಂಗ್ ತರೀಕ ನೋಡುತ್ತಾ ಯಿರತಕ್ಕದ್ದು.

ನಂ. 370. ತಾರೀಖು 14ನೇ ಫಿಬ್ರವರೀ 1876.

ಮೆಸ್ಸರ್ ಪಿ. ನ. ಕೃಷ್ಣಮೂರ್ತಿ B. L. ಯವರು, ನಂಜನಗೂಡು ಸಬ್ ಡಿವೀಜ್ಞ ಕೋರ್ಟು ಚಾರ್ಜನ್ನು ಮೆಸ್ಸರ್ ಶ್ರೀನಿವಾಸರಾವ್ ಯವರಿಂದ 1876ನೇ ಇಸವಿ ಜನವರೀ 22ನೇ ಮುರ್ತುಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ನಂ. 371. ತಾರೀಖು 17ನೇ ಫಿಬ್ರವರೀ 1876.

ಅಪಾಶಿಕೇರಿ ಮೆಕ್‌ಫಾರ್ಲೆಡ್ ಯವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾವನ್ನು ಕಾಹಿಲೆ ರಜಾಕ್ಕೆ ಬದಲಾಯಿಸಿ, ಹುಟ್ಟಿದ 1876ನೇ ಇಸವಿ ಜನವರೀ 24ನೇ ಮುರ್ತುಂ 353ನೇ ನಂಬರ್ ಈ ಅಫಿಸ್ ಇಸ್ತಿಹಾರ್ ನಾಮೆಯು ಯಿದರ ದೆಶೇಯಿಂದ ರದ್ದು ಮಾಡಲ್ಪಟ್ಟು ಇದೆ.

ನಂ. 372. ತಾರೀಖು 17ನೇ ಫಿಬ್ರವರೀ 1876.

ಮೇಜರ್ ಲಿಂಡ್ಸೆ ಸಾಹೆಬರು ಟ್ರೆ ವ ಕಂಟೋರ್ಮೆಂಟ್ ಮ್ಯಾಜಿಸ್ಟ್ರೇಟ್ ಆಫಿಸ್ ಚಾರ್ಜನ್ನು ಮೇಜರ್ ಮೊಟೆಟ್ ಸಾಹೆಬರಿಂದ 1876ನೇ ಇಸವಿ ಫಿಬ್ರವರೀ 9ನೇ ಮುರ್ತುಂ ಮಧ್ಯಾನ್ಹ ತ್ವರ ತೆಗದುಕ್ಕೊಂಡರು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ನಂ. 121. ತಾರೀಖು 14ನೇ ಫಿಬ್ರವರೀ 1876.

ಮೈಸೂರ ವ ಕೊಡಗು ಶೀಮೆಗಳಲ್ಲಿರುವ 3ನೇ ಕ್ಲಾಸ್ ಮುಸಾಫರ್ ಬಂಗ್ಲೆಗಳ ವಾಸದ ವಿಷಯ್ದುದಲ್ಲಿ ಯೇರ್ಪಟ್ಟ ಇದರಿ ಬರುವ ನಿಬಂಧನೆಗಳು, ಸ್ರ 1876ನೇ ಇಸವಿ ಏಪ್ರೆಲ್ ಗುರ್ರೇ ತಾರೀಖು ಲಾಗಾಯತು ಜಾರೀಯಲ್ಲಿ ಬರತಕ್ಕದ್ದಾಗಿರುತ್ತೆ.

(1) 24 ಘಂಟೆಗೆ ಮಿಾರದ ಯಾವ ವಾಸಕ್ಕಾಗಲಿ ರುಸುಂ ಕಟ್ಟಲ್ಪಡುವದಿಲ್ಲವು.

(2) 24 ಘಂಟೆಗೆ ಮಿಾರುವ ಯಾವ ವಾಸಕ್ಕಾಗಲಿ ಈ ಕಳಗೆ ಬರುವ ಮೇರೆ ರುಸುಂ ವಾವತೀ ಮಾಡಲ್ಪಡತಕ್ಕದ್ದು.

ವಯಸ್ಸಿನವನಾದ ಪ್ರತಿ ಗಂಡಸಿಗೆ ದಿನವಹಿ 4 ಆಣೆ, ಗಂಡಸ್ಕಂಡತಿಗೆ ಯಾ ಕುಟುಂಬಕ್ಕೆ ಆಣೆ 6.

(3) 24 ಘಂಟೆಯ ಚಿಲ್ಲರೇ ಭಾಗಕ್ಕಾಗಿ ಯಾವ ಪಜಾ ಕೊಡಲ್ಪಡುವದಿಲ್ಲವು.

(4) ಮೈಸೂರು ವ ಕೊಡಗು ಸರಕಾರ ನೌಕರರಿಗೆ ಪೂರಾ 3 ದಿನಗಳ ವಾಸ ಮಾಫಾಗಿ ನಡಿಸಲ್ಪಡುವದಕ್ಕೆ ಆ ಬಳಿಕ ಮೇಲೆ ನಮೂದಿಸಲ್ಪಟ್ಟ ರುಸುಂ ಮೇರೆ ಅವರಿಂದ ರುಸುಂ ಕೊಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

R. H. SANKEY, *Lieut-Col., R. E.,*
Secretary, P. W. D.

ಕೊಡಗು ಚೀಫ್ ಕಮ್ಮಿಷನರ್‌ರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 25. ತಾರೀಖು 3ನೇ ಪಿಬ್ರವರೀ 1876.

ಇದರಿಂದ ತಿಳಿಯಪಡಿಸುವದೇನಂದರೆ, ನಾಲಕ್‌ನಾಡು ಮಹಲಿಗೆ ಸೇರಿದ ಈ ಕೆಳಗೆ ವಿವರಿಸಿ ಇರುವ ಸರಹದ್ದಿನ ಒಳಗೆ ಇರುವ ತೋಟಗಳನ್ನು ಮೂರು ವರುಷಕ್ಕೆ ಅಂದರೆ, ಸ್ಯ 1876ನೇ ಇಸವಿ ಏಪ್ರೆಲ್ ಗುರ್ಸೇ ತಾರೀಖು ಲಾಗಾಯತು ಸ್ಯೆ 1879ನೇ ಇಸವಿ ಮಾರ್ಚೀ 31ನೇ ತಾರೀಖಿನ ವರಿವಿಗೂ ಗೇಣಿ ಕೊಡಲಿಕ್ಕೋಸ್ಕರ ಮಡಿಕೆರೆಯಲ್ಲಿ ಸೂಪ್ರಿಟೆಂಡೆಂಟ್ ಕಛೇರಿಯಮುಂದೆ, ಸ್ಯ 1876ನೇ ಇಸವಿ ಮಾರ್ಚೀ ಗುರ್ಸೇ ತಾರೀಖಿನಲ್ಲಿ ಹರಾಜು ಹಾಕಲ್ಪಡುತ್ತೆ.

2. ಹರಾಜುಕಾಲದಲ್ಲಿ ಹರಾಜಿನಲ್ಲಿ ಪಡೆಕೊಂಡವನು ನೂರು ರೂಪಾಯಿ ಶೇವಣಾತಿ ಇಡಬೇಕು, ಇಲ್ಲವಾದರೆ ಹರಾಜು ರದ್ದುಪಡಿಸಿ ಗೇಣೀಯನ್ನು ಪುನಹಾ ಹರಾಜು ಹಾಕಲ್ಪಡುವದು.

3. ಸೂಪ್ರಿಟೆಂಡೆಂಟ್ ಸಾಹೆಬರವರ ಹುಕ್ಕುಂ ಇಲ್ಲದೆ ತೋಟದ ಬಳಿಗೆ ಇರುವ ಕಾಡುಮರವನ್ನಾಗಲಿ ಫಲವೃಕ್ಷಗಳನ್ನಾಗಲಿ ಕಡಿಯಕೂಡದು.

4. ಹರಾಜಿನ ಮೊಬಲಗನ್ನು ಮೂರು ಖಿಸ್ತಾಗಿ ಮೂರು ವರುಷದಲ್ಲಿ ಆಯಾಯು ವರುಷದ ಮಾರ್ಚೀ ಗುರ್ಸೇ ತಾರೀಖಿನಲ್ಲಿ ಕೊಡತಕ್ಕದ್ದು.

5. ಸ್ಯ 1878—79ನೇ ಇಸವಿಯ ಆಖ್ಯೆರು ಖಿಸ್ತಿನ ಹಣವನ್ನು ಸಲಿಕೆ ಮಾಡಿದ ಕೂಡ್ಲೇ ಶೇವಣಾತಿಯಾಗಿ ಮಾಡಿಟ್ಟಿರುವ 100 ರೂಪಾಯಿ ಯನ್ನು ವಾಪಸು ಕೊಡಲ್ಪಡುವದು.

6. ಸಾಲೀಯಾನಾ ಕೊಡತಕ್ಕ ಖಿಸ್ತು ಆಯಾಯು ವರುಷದ ಮಾರ್ಚೀ ಗುರ್ಸೇ ತಾರೀಖಿಗೆ ಸರಿಯಾಗಿ ಕೊಡದೆ ಹೋಪರೆ ಸೂಪ್ರಿಟೆಂಡೆಂಟ್ ಸಾಹೆಬರವರಿಂದಾ ಗೇಣಿ ರದ್ದು ಮಾಡಲ್ಪಟ್ಟು ಫಸಲ್ ಜಪ್ತು ಮಾಡಲ್ಪಡುವದು, ಮತ್ತು ಶೇವಣಾತಿ ಮಾಡಿಟ್ಟ 100 ರೂಪಾಯಿ ಸರಕಾರಕ್ಕೆ ತೆಗದು ಕೊಳ್ಳಲ್ಪಡುವದು.

ಚಕ್ಕುಬಂದಿ.

ಕೀರತೋಟ, ಅಂದಾಜು 6 ಯಕರೆ ವುಳ್ಳದ್ದು.

ವುತ್ತರಕ್ಕೆ ಅರಮನೇ ಕಡಂಗಾ.
ದಕ್ಷಿಣಕ್ಕೆ ಮಹಲಿನಿಂದಾ ವೀರ ರಾಜೇಂದ್ರ ಪೇಟೆಗೆ ಹೋಗುವ ಮಾರ್ಗ.
ಪೂರ್ವಕ್ಕೆ ಅರಮನೇ ಕಡಂಗಾ.
ಪಶ್ಚಿಮಕ್ಕೆ ಮಹಲಿನಿಂದ ಮಡಿಕೆರೆಗೆ ಹೋಗುವ ಮಾರ್ಗ.